

ಕಲೆ: ಲಬನಿ ಜಾಂಗಿ, ಕೃಪೆ: ಪೀಪಲ್ಸ್ ಆರ್ಕೈವ್ ಆಫ್ ರೂರಲ್ ಇಂಡಿಯಾ




ಎಚ್.ಎಸ್. ರಾಘವೇಂದ್ರ ರಾವ್ ಅವರು ಕನ್ನಡಕ್ಕೆ ತಂದ ಕಮೂನ 'ಪ್ಲೇಗ್' ಕೃತಿಯ ಮುಖಪುಟ

ತರ್ಕಿಸಿ ನಿರ್ಧಾರಕ್ಕೆ ಬರುವುದು ಸಾಧ್ಯವೇ ಇಲ್ಲ.

ವಾರದ ಮೊದಲ ಐದು ದಿನ ಕಷ್ಟಪಟ್ಟು ದುಡಿಯುವುದು, ವೀಕೆಂಡ್‌ನಲ್ಲಿ ಮೋಜು ಮಸ್ತಿ ಮಾಡುವುದು ಇಲ್ಲಿನ ಜನರ ಪ್ರಧಾನ ಲಕ್ಷಣ ಎಂದು ಕೆಲವರನ್ನಷ್ಟೇ ಮನಸ್ಸಿನಲ್ಲಿಟ್ಟುಕೊಂಡು ಬೀಡುಬೀಸಾಗಿ ಹೇಳಿಬಿಟ್ಟರೆ, ಹೊಟ್ಟೆ ಹೊರೆಯಲು ರಜೆಯೇ ಇಲ್ಲದಂತೆ ವರ್ಷದ 365 ದಿನವೂ ಕೆಲಸ ಮಾಡುವವರನ್ನು ಅವಮಾನಿಸಿದಂತೆ ಆಗುವುದಲ್ಲವೇ? ಎಲ್ಲ ವರ್ಗಗಳ ಜನರ ದಿನಚರಿಯನ್ನೂ ಅವರ ಜೀವನಶೈಲಿಯನ್ನೂ ಚರ್ಚಿಸಲು ಈ ನಿರೂಪಕನಿಗೆ ಖಂಡಿತ ಆಸಕ್ತಿಯುಂಟು. ಆದರೆ, ಓದುಗರಿಗೆ ಬೋರ್ ಹೊಡೆಸುವ ಕೆಲಸಕ್ಕೆ ಆತ ಕೈಹಾಕುವುದಿಲ್ಲ. ಘಟನೆಗಳು ಬಿಚ್ಚಿಕೊಳ್ಳುತ್ತಾ ಸಾಗಿದಂತೆ ಈ ಊರಿನ ಜನರ ಎಷ್ಟೋ ವಿವರಗಳು ಬೇಡವೆಂದರೂ ಹೊರಬೀಳುತ್ತವೆ ಬಿಡಿ.

ಆ ವರ್ಷದ ವಸಂತ ಋತುವಿನ ಆಸುಪಾಸಿನಲ್ಲಿ ಒಂದು ಘಟನೆ ನಡೆಯಿತು. ಅದು ಇನ್ನುಮುಂದೆ ವಿವರಿಸಲಿರುವ ಗಂಭೀರವಾದ ಆಗುಹೋಗುಗಳಿಗೆ ದಿಕ್ಸೂಚಿಯಾಯಿತು. ಜನರಿಗೆ ಅದರ ಮುನ್ಸೂಚನೆ ಇದ್ದರೂ ಹೇಗೆ ಎದುರಿಸಬೇಕೆಂಬ ತಿಳಿವಳಿಕೆ ಇರಲಿಲ್ಲ ಎನ್ನುವುದನ್ನು ಆಗಿನ ಸಂದರ್ಭಕ್ಕೆ ಸಾಕ್ಷಿಯಾದ ಯಾರಾದರೂ ಒಪ್ಪಿಕೊಳ್ಳುತ್ತಾರೆ. ಅವರಿಗೆ ಈ ಘಟನೆಗಳು ಸಹಜವೆಂದೇ ತೋರಬಹುದು. ಉಳಿದವರಿಗೆ ಇದನ್ನು ನಂಬುವುದೇ ಕಷ್ಟ ಎನಿಸಬಹುದು. ಆದರೆ, ಇತಿಹಾಸಕಾರ ಇಂಥ ಪರಸ್ಪರ ವಿರೋಧಾಭಾಸಗಳನ್ನು ಗಮನಕ್ಕೆ ತೆಗೆದುಕೊಳ್ಳಲು ಸಾಧ್ಯವಿಲ್ಲ. 'ಇದು ಹೀಗೆ ನಡೆಯಿತು' ಎಂದು ಹೇಳುವುದಷ್ಟೇ ಅವನ ಕೆಲಸ.

ಅದೂ ಅಲ್ಲದೆ ಈ ನಿರೂಪಕ ಅದೃಷ್ಟವಶಾತ್ ಹತ್ತು ಹಲವು ಮೂಲಗಳಿಂದ ಮಾಹಿತಿ ಸಂಗ್ರಹಿಸುವ ಅವಕಾಶ ಪಡೆದಿದ್ದ. ತಾನು ವಿವರಿಸುವ ಪ್ರತಿಯೊಂದು ಘಟನೆಯಲ್ಲೂ ಅವನಿಗೆ ಸ್ವತಃ ಭಾಗವಹಿಸುವ ಅನಿವಾರ್ಯತೆ ಇತ್ತು. ಹೀಗಾಗಿ ಇಲ್ಲಿನ ವಿವರಗಳು ಅಧಿಕೃತ ಎಂದು ಆತ ಖಚಿತವಾಗಿ ಹೇಳಬಲ್ಲ. ಇರಲಿ, ಆತ ಹೇಗೆ ಹೇಗೆ ಮಾಹಿತಿ ಸಂಗ್ರಹಿಸಿದ ಎಂದೆಲ್ಲ ಹೆಚ್ಚಿನ ವಿವರಕ್ಕೆ ಹೋಗಿ ನಿಮಗೆ ತಲೆಚಿಟ್ಟು ಹಿಡಿಸದೆ ನೇರವಾಗಿ ಕಥೆ ಹೇಳುವ ಸಮಯ ಇದೀಗ ಬಂದಿದೆ.

ಮಾರ್ಚ್ 9ನೇ ತಾರೀಖು ಡಾ. ಬರ್ನಾರ್ಡ್ ರಿಯೂ ಅವರು ಆಪರೇಷನ್ ಥಿಯೇಟರ್‌ನಿಂದ ಹೊರ ಬರುವಾಗ ಗಂಟೆ ಮೊಳಗಿಸುತ್ತಾ ಆಂಬುಲೆನ್ಸ್‌ವೊಂದು ಬಂತು. ನಿತ್ಯ ಹೀಗೆ ಹತ್ತಾರು ಸಲ ಗಲಾಟೆ ಮಾಡುತ್ತಾ ಎಡತಾಕುವ ಆಂಬುಲೆನ್ಸ್ ಕಡೆಗೆ ಅವರ ಗಮನ ಅಷ್ಟಾಗಿ ಹೋಗಲಿಲ್ಲ ಅಥವಾ ನಿರ್ಲಿಪ್ತವಾಗಿ ನೋಡಿ ಮುಂದೆ ಸಾಗಿದರು. ಆದರೆ, ಚೇಂಬರ್‌ಗೆ ಮರಳಿದ ಮೇಲೆ ಅವರ ಟೇಬಲ್ ಮೇಲೊಂದು ಫೈಲ್ ಇತ್ತು. ಅದರೊಳಗಿನ ರಿಪೋರ್ಟ್ ಮೇಲೆ ಕಣ್ಣಾಡಿಸುತ್ತಲೇ 'ಛೇ, ಆ ದಿನ ಬಂದೇ ಬಿಟ್ಟಿತಲ್ಲ' ಎಂದವರು ಉದ್ಗಾರ ತೆಗೆದರು. ಅದರೊಳಗೆ ದಪ್ಪಕ್ಷರದಲ್ಲಿ ಹೀಗೆ ಬರೆಯಲಾಗಿತ್ತು: **'Tested positive for covid19'**. ಅಮೆರಿಕದಿಂದ ವಾರದ ಹಿಂದೆಯಷ್ಟೇ ಮರಳಿದ ಸಾಫ್ಟ್‌ವೇರ್ ಎಂಜಿನಿಯರ್ ಒಬ್ಬ ಮಾಡಿಸಿಕೊಂಡ ಸೋಂಕುಪತ್ತೆ ಪರೀಕ್ಷಾ ವರದಿ ಅದು. ಹ್ಞೂಂ, ಬೆಂಗಳೂರಿನಲ್ಲಿ ಅಧಿಕೃತವಾಗಿ ದಾಖಲಾದ ಮೊದಲ ಕೋವಿಡ್ ಪ್ರಕರಣ ಕೂಡ. 'ಇನ್ನು ಒಂದಿನಿತೂ ಕಾಲಾವಕಾಶ ಇಲ್ಲ. ತುರ್ತಾಗಿ ಎಲ್ಲ ವ್ಯವಸ್ಥೆಯೂ ಆಗಬೇಕು...' ಡಾ.ರಿಯೂ ತಮಗೆ ತಾವೇ ಹೇಳಿಕೊಂಡರು.

ಮಾರನೇ ದಿನ, ಅಂದರೆ ಮಾರ್ಚ್ 10ರಂದು, ಡಾ.ರಿಯೂ ಆಸ್ಪತ್ರೆಯ ವೈದ್ಯರ ಸಭೆ ನಡೆಸುತ್ತಿದ್ದಾಗ ಸಹಾಯಕ ಬಂದು 'ಸರ್, ಕಲಬುರ್ಗಿಯಿಂದ ಫೋನ್' ಎಂದ.

'ಹಲೋ ಡಾ. ರಿಯೂ ಹಿಯರ್' ಎನ್ನುವುದೇ ತಡ, ಅತ್ತಲಿನ ಧ್ವನಿ, 'ಸರ್, ದ್ಯಾಟ್ ಇನ್‌ಫೆಕ್ಟೆಡ್ ಪೇಷಂಟ್ ಈಸ್ ನೋ ಮೋರ್' ಎಂದಿತು.

'ಯು ಮೀನ್, ಕಂಟ್ರೀಸ್ ಫಸ್ಟ್ ಕೋವಿಡ್ ಡೆತ್?'

'ಯೆಸ್ ಸರ್.'

'ಓಹ್, ವೈರಸ್ ಟೇಕ್ಸ್ ಇಟ್ಸ್ ಫಸ್ಟ್ ಪ್ರೇ ಇನ್ ದಿ ಕಂಟ್ರಿ. ಅದು ರ್‍ಯಾಪಿಡ್ ಆಗಿ ಗ್ರೋತ್ ಆಗ್ತಿದೆ.